ಓ ಎಸ ನಂ. **79/2018**
ಪಿಡಬ್ಲೂ-**1** ( ಈಶ್ವರಮ್ಮ )

<u>ಇಂದು ದಿನಾಂಕಃ **01-03-2021** ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ಮಾಡಿಸಲಾಯಿತು.</u>

<u>ಪಾಟೀ ಸವಾಲುಃ ಶ್ರೀ ವಿ.ಜೆ.ಎಮ್ ವಕೀಲರಿಂದ (**1** ರಿಂದ **3** ನೇ ಪ್ರತಿವಾದಿ ಪರ )</u>

ಸರ್ವೆ ನಂ.497/5 ಮತ್ತು ಮನೆ ನಂ.8-33 ಮಾತ್ರ ನಮ್ಮ ಹಿರಿಯರ ಆಸ್ತಿಗಳು ಎಂದರೆ ಸರಿ. ಸರ್ವೆ ನಂ.497/5 ಜಮೀನು 2 ಎಕರೆ 16 ಗುಂಟೆ ಎಂದರೆ ಸರಿ. ಅದು ಒಳ್ಳೆಯ ಭೂಮಿ ಅಲ್ಲ ಎಂದರೆ ಸರಿಯಲ್ಲ. ಸರ್ವೆ ನಂ. 83, 82/2, 526 ಮತ್ತು ಮನೆ ನಂ.8-44 ಖರೀದಿ ಮಾಡಿರುವ ಆಸ್ತಿ ಎಂದರೆ ಸಾಕ್ಷಿಯು ನನ್ನ ತಂದೆಯವರು ಖರೀದಿ ಮಾಡಿರುತ್ತಾರೆ ಎಂದು ನುಡಿದಿರುತ್ತಾರೆ. ಸದರಿ ಆಸ್ತಿಗಳನ್ನು ಯಾವಾಗ ಖರೀದಿ ಮಾಡಿದ್ದಾರೆಂದರೆ ನನಗೆ ಗೊತ್ತಿಲ್ಲ ಅದು ನನ್ನ ತಂದೆಯವರಿಗೆ ಗೊತ್ತಿರುತ್ತದೆ. ನನ್ನ ತಂದೆಯವರಿಗೆ ಶಾಲಾ ಶಿಕ್ಷಕರಾಗಿದ್ದು, ಅವರ ಆದಾಯಕ್ಕೆ ಸಂಬಂಧಪಟ್ಟಂತೆ ನಾನು ನ್ಯಾಯಾಲಯಕ್ಕೆ ಯಾವುದೇ ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ ಎಂದರೆ ಸರಿಯಲ್ಲ. ನನ್ನ ತಂದೆಯವರಿಗೆ ದಾವಾ ಸ್ವತ್ತುಗಳನ್ನು ಖರೀದಿ ಮಾಡಲು ಯಾವುದೇ ಆದಾಯ ಇರಲಿಲ್ಲ ಎಂದರೆ ಸರಿಯಲ್ಲ. ನನ್ನ ತಂದೆಯವರು ಭೂಮಿಗಳನ್ನು ಬೇರೆ ಬೇರೆ ಸಮಯದಲ್ಲಿ ಖರೀದಿ ಮಾಡಿದ್ದಾರೆ ಎಂದರೆ ಸರಿ. ಮನೆ ನಂ.8-33 ಬಿದ್ದು ಹೋಗಿರುವ ಮನೆಯಾಗಿದ್ದು, ವಾಸಕ್ಕೆ ಯೋಗ್ಯವಲ್ಲ ಎಂದರೆ ಸರಿ. ನನ್ನ ತಾಯಿಗೆ ಯಾವುದೇ ಅಣ್ಣ-ತಮ್ಮಂದಿರು ಇದ್ದಿರುವುದಿಲ್ಲ. ನನ್ನ ತಾಯಿಗೆ ಯಾವುದೇ ಅಣ್ಣ-ತಮ್ಮಂದಿರು ಇಲ್ಲದೇ ಇರುವುದರಿಂದ ಅವರ ತವರು ಮನೆಯಿಂದ ಯಾವುದೇ ಆಸ್ತಿ ಬಂದಿರುವುದಿಲ್ಲ. ನನ್ನ ತಾಯಿಯ ತವರು ಮನೆಗೆ ಯಾವುದೇ ಆಸ್ತಿ ಇದ್ದಿರುವುದಿಲ್ಲ. ನನ್ನ ತಾಯಿಯವರು ತಮ್ಮ ಮನೆಯ ಆಸ್ತಿ ಖರೀದಿ ಮಾಡಿ ಅಡಕಿಯಲ್ಲಿ ಆಸ್ತಿಗಳನ್ನು ಖರೀದಿ ಮಾಡಿದ್ದಾರೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರಿದು ನನ್ನ ತಂದೆಯವರು ನಿವೃತ್ತಿ ಹೊಂದಿದ್ದ ನಂತರ ಖರೀದಿ ಮಾಡಿದ್ದಾರೆ ಎಂದು ನುಡಿದಿರುತ್ತಾರೆ. ನನ್ನ ದಾವೆಯಲ್ಲಿ ಸದರಿ ವಿಷಯವನ್ನು ಬರೆಸಿಲ್ಲ ಎಂದರೆ ಸರಿಯಲ್ಲ. ನನ್ನ ಅಣ್ಣ ಉಪನ್ಯಾಸಕರಾಗಿ ಕೆಲಸ ಮಾಡುತ್ತಾರೆ. ಅವರಿಗೆ ಯು.ಟಿ.ಸಿ ಸ್ಕೇಲ್ ಸಂಬಳ ಬರುತ್ತದೆ ಎಂದರೆ ಸರಿ. ಪ್ಲಾಟ ನಂ.51 ವಿದ್ಯಾನಗರ ಸೇಡಂ ನ್ನು ನನ್ನ ಅಣ್ಣ ಸ್ವಂತ ದುಡಿಮೆಯಿಂದ ಖರೀದಿ ಮಾಡಿದ್ದಾರೆ ಎಂದರೆ ಸರಿಯಲ್ಲ. ಅದರ ಮೇಲೆ ಅವರು ಸಾಲ ಪಡೆದುಕೊಂಡಿದ್ದಾರೆ ಎಂದರೆ ಸರಿ. ಸದರಿ ಸಾಲವನ್ನು ನನ್ನ ಅಣ್ಣ ತನ್ನ ಸಂಬಂಳದಿಂದ ಮರುಪಾವತಿ ಮಾಡಿದ್ದಾರೆ ಎಂದರೆ ನನ್ನ ತಂದೆಯವರು ತಿಂಗಳಿಗೆ ರೂ.6,000/- ಹಣವನ್ನು ಅದಕ್ಕೆ ಸಂಬಂದಪಟ್ಟಂತೆ ನೀಡುತ್ತಿದ್ದರು ಎಂದು ಸಾಕ್ಷಿ ನುಡಿಯುತ್ತಾರೆ. ಹಣವನ್ನು ನೀಡುವಾಗ ನನ್ನ ತಂದೆಯವರು ಕೊಡುತ್ತಿದ್ದರು ನನ್ನ ಅಣ್ಣ ತೆಗೆದುಕೊಳ್ಳುತ್ತಿದ್ದರು.

ಓ ಎಸ ನಂ. **79/2018**
ಪಿಡಬ್ಲೂ-**1** ( ಈಶ್ವರಮ್ಮ )

ನನ್ನ ಅಣ್ಣ ಉಪನ್ಯಾಸಕನಾಗಿ ಕೆಲಸ ಮಾಡುವ ಮುಂಚೆ ಬೈಪ್ ನಲ್ಲಿ ಕೆಲಸ ಮಾಡುತ್ತಿದ್ದರು, 1992 ರಲ್ಲಿ ಅದನ್ನು ಬಿಟ್ಟು ಬಂದಿರುತ್ತಾರೆ. ಅಲ್ಲಿ ಅವರಿಗೆ ಎಷ್ಟು ಸಂಬಳ ಇತ್ತು ಎಂದರೆ ನನಗೆ ಗೊತ್ತಿಲ್ಲ. ಉಪನ್ಯಾಸ ಮಾಡುವಾಗ ನನ್ನ ಅಣ್ಣ ಮನೆಯಲ್ಲಿ ಟ್ಯೂಷನ ಹೇಳುತ್ತಿದ್ದರು ಎಂದರೆ ಸರಿಯಲ್ಲ. ನನ್ನ ತಂದೆಯವರಿಗೆ ನಿವೃತ್ತಿ ನಂತರ ಎಷ್ಟು ಹಣ ಬಂತು ಎಂದರೆ ನನಗೆ ಹೇಳಲು ಆಗುವುದಿಲ್ಲ. ನಾನು ನನ್ನ ಗಂಡನ ಮರಣದ ನಂತರ ನನ್ನ ತವರು ಮನೆಯಲ್ಲಿ ವಾಸವಾಗಿದ್ದೇನೆ ಎಂದರೆ ಸರಿ. ನಮ್ಮ ಮನೆಯ ವ್ಯವಹಾರವು ನನ್ನ ತಂದೆಯವರು ನಡೆಸಿಕೊಂಡು ಹೋಗುತ್ತಿದ್ದರು, ಅವರಿಗೆ ಗೊತ್ತಿರುತ್ತದೆ. 4 ನೇ ವಾದಿ ಸುಮಿತ್ರ ಈಗ ಮದುವೆಯಾಗಿದ್ದು ರುಕುಂಪಲ್ಲಿಯಲ್ಲಿ ವಾಸವಾಗಿರುತ್ತಾರೆ. 4 ನೇ ವಾದಿಗೆ ಇದು ಒಂದೇ ಮದುವೆಯಾಗಿದ್ದು, ಅವರ ಗಂಡನಿಗೆ ಇದು 2 ನೇ ಮದುವೆಯಾಗಿರುತ್ತದೆ. ನಾನು ಮದುವೆ ಕಾಲಕ್ಕೆ ಅಲ್ಲಿ ಹೋಗಿರುತ್ತೇನೆ. ಮದುವೆ ಸಮಯದಲ್ಲಿ ನನ್ನ ತಂದೆಯವರು 5 ಲಕ್ಷ ಹಣ ನೀಡಿದ್ದು, ನಂತರ ಸುಮಿತ್ರ 4 ನೇ ವಾದಿ ವಾಪಸ್ಸು ನೀಡಿರುತ್ತಾರೆ. ನನ್ನ ತಂದೆಯವರು 4 ನೇ ವಾದಿಗೆ ರೂ.10 ಲಕ್ಷ ಹಣ ನೀಡಿದ್ದಾರೆ ಎಂದರೆ ಸರಿಯಲ್ಲ. ಸದರಿ ರೂ.10 ಲಕ್ಷ ಹಣದಲ್ಲಿ, ರೂ.10 ಲಕ್ಷ ಹಣ ನಗದು ರೂಪದಲ್ಲಿ ಮತ್ತು 10 ಲಕ್ಷ ಹಣ ಬ್ಯಾಂಕನಲ್ಲಿ ಠೇವಣಿ ಮಾಡಿದ್ದಾರೆ ಎಂದರೆ ಸರಿಯಲ್ಲ. ಸರ್ವೆ ನಂ.154 ರ ಜಮೀನು 4 ಎಕರೆ 24 ಗುಂಟೆ ನನ್ನ ಅಕ್ಕನ ಹೆಸರಿನಲ್ಲಿದ್ದು, ನನ್ನ ಅಕ್ಕನ ಗಂಡ ಮರಣದ ನಂತರ ಹಣ ಬಂದಿದ್ದು, ನನ್ನ ತಂದೆಯವರು ಸದರಿ ಆಸ್ತಿಯನ್ನು ಅವರ ಹೆಸರಿಗೆ ಖರೀದಿ ಮಾಡಿರುತ್ತಾರೆ. ಸದರಿ ಆಸ್ತಿಯು ನನ್ನ ತಂದೆಯವರು ಖರೀದಿ ಮಾಡಿದ್ದು, ಅದನ್ನು ಬೇಕಂತಲೇ ಈ ದಾವೆಯಲ್ಲಿ ಸೇರಿಸಿಲ್ಲ ಎಂದರೆ ಸರಿಯಲ್ಲ. ಈಗ ಸಧ್ಯ ಸರ್ವೆ ನಂ.154 ನನ್ನ ಅಕ್ಕನ(4 ನೇ ವಾದಿಯ) ಹೆಸರಿಗೆ ಇದ್ದಿರುತ್ತದೆ. ನನ್ನ ಗಂಡ ಮರಣ ಹೊಂದಿದ್ದು, ಅವರ ಮನೆಯ ಕಡೆಯಿಂದ ನನಗೆ ಹಣ ಬಂದಿರುತ್ತದೆ, ಆಸ್ತಿ ಬಂದಿರುವುದಿಲ್ಲ. ಆ ಹಣದಿಂದ ನಾನು ಏನೂ ಖರೀದಿ ಮಾಡಿರುವುದಿಲ್ಲ. ನನ್ನ ತಂದೆಯವರು ಮರಣ ಹೊಂದುವ ಮುಂಚೆ ಅಪಘಾತಕ್ಕೆ ಇಡಾಗಿದ್ದರು ಎಂದರೆ ಸರಿ. ಸದರಿ ಅಪಘಾತದಲ್ಲಿ ಅವರ ಸೊಂಟದ ಎಲುಬು ಮುರಿದಿತ್ತು ಎಂದರೆ ಸರಿ. ಆ ಸಂದರ್ಬದಲ್ಲಿ ಆಸ್ಪತ್ರೆಗೆ ಕರೆದುಕೊಂಡು ಹೋಗಿ ಬರುವುದನ್ನು ಅವರ ಮೊಮ್ಮಗನಾದ ರೋಹಿತ್ ರೆಡ್ಡಿ ಮಾಡಿದ್ದಾನೆ ಎಂದರೆ ನಾನು ಮಾಡಿದ್ದೇನೆ ಎಂದು ಸಾಕ್ಷಿ ನುಡಿದಿರುತ್ತಾರೆ. ನಾನು ನನ್ನ ತಂದೆಯವರನ್ನು ಆಸ್ಪತ್ರೆಗೆ ಕರೆದುಕೊಂಡು ಹೋಗಿಲ್ಲ, ಯಾವುದೇ ಸೇವೆಯನ್ನು ಮಾಡಿಲ್ಲ ಎಂದರೆ ಸರಿಯಲ್ಲ.

ಓ ಎಸ ನಂ. **79/2018**
ಪಿಡಬ್ಲೂ-**1 ( ಈಶ್ವರಮ್ಮ )**

**(ಪ್ರತಿವಾದಿ ಪರ ವಕೀಲರ ವಿನಂತಿ ಮೇರೆಗೆ ಮುಂದುವರಿದ ಪಾಟೀ ಸವಾಲಿಗೆ ಮುಂದೂಡಲಾಯಿತು)**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ.ಸರಿ ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು,
ಮತ್ತು ಜೆ.ಎಮ್.ಎಫ್.ಸಿ, ಸೇಡಂ.